ಹಿಂದೆ ತಾನೆ ತಮ್ಮನ ಊರಿನಲ್ಲಿ ಅವನನ್ನು ಬಿಟ್ಟು ಬಂದು, ಹೆಣ್ಣು ನೋಡಲು ಆರಂಭಿಸಿದ್ದರು. ಈ ವಿಷಯವನ್ನೆಲ್ಲಾ ತಿಳಿದು, ಮದುವೆಗೆ ಮುಂಚೆಯೇ ಮಗ ಏನಾದರೂ ಎಡವಟ್ಟು ಮಾಡಿಬಿಟ್ಟು, ಈಗ ಅವನಿಲ್ಲವೆಂಬ ಆತಂಕದಲ್ಲಿ ಆ ಹುಡುಗಿ ಏನಾದರೂ ಹೆಚ್ಚುಕಡಿಮೆ ಮಾಡಿಕೊಂಡುಬಿಟ್ಟಿತೋ? ಏನೋ? ಎಂಬ ಊಹೆ ಮಾಡಿದ್ದೇ ತಡ ತಮ್ಮ ವಂಶವನ್ನು ಸಾಮೂಹಿಕವಾಗಿ ಚಿತೆಗೇರಿಸಿಬಿಡುತ್ತಾರಲ್ಲ ಎಂಬ ಆತಂಕದಲ್ಲಿ ಶಾನುಭೋಗರು ಕೈಕಾಲು ಆಡಿಸಲು ಅಸಮರ್ಥರಾಗಿ ಲಕ್ವಾ ಹೊಡೆದಂತೆ ಕುಳಿತು ಬಿಟ್ಟರು.

'ಏನಂತೀಯಾ? ರಾಜಪ್ಪ.' ಗೌಡರು ಏನೇನೋ ಹೇಳುತ್ತಾ ತೊಡೆ ಮುಟ್ಟಿ ಎಚ್ಚರಿಸಿದಾಗ ನಾಲ್ಕರ ಚಳಿ ಬಂದಂತೆ ನಡುಗಿಹೋದರು. ಗೌಡರಿಗೆ ಕನಿಕರವಾಯಿತು. ಪಾಪದ ವ್ಯಕ್ತಿ, ಮಗನಿಂದಾಗಿ ಎಂತಹ ಸ್ಥಿತಿಗೆ ಬರಬೇಕಾಯಿತು. 'ಈ ಬೆಚ್ಚಾಟ ಯಾಕೆ ಅಂತೀನಿ. ನಾವೇನು ತಪ್ಪು ಮಾಡೀವಿ ಅಂತ ಹೆದರ್ಕಬೇಕು. ವಿನಾಕಾರಣ ನಾವ್ಯಾರೂ ಹೆದರ್ಕಬಾರದು. ಹಂಗೆ ಹೆದರ್ಕಂಡ್ರೆ ನಾವು ಆವ್ರಿಗೆ ಸದರ ಆಗೋಯ್ತಿವಿ. ಅದು ಯಾರ ಹೆಣಾಂತ ತಿಳ್ಕಂಡು ಮುಂದಿನ ಯಿಚಾರ ಮಾಡುವಾ. ಇಷ್ಟೆಲ್ಲಾ ಮಾತು ಯಾಕಪ್ಪಾ ಅಂದ್ರೆ; ಅಂಜುಂಭಾನು ಮೂರು ದಿನದಿಂದ ಕಾಣ್ತಾ ಇಲ್ಲ. ಬುಡನ್ ಸಾಬರು ಕಂಪ್ಲೇಂಟ್ ಕೊಟ್ಟ್ ಬಂದೋರೆ' ಗೌಡರ ಮಾತು ಕೇಳಿದ ತಕ್ಷಣ ಎಲ್ಲರೂ ತಣ್ಣಗಾಗಿ ಹೋದರು. ಎಲ್ಲರ ಕಣ್ಣ ಮುಂದೆ ರಾಜಪ್ಪನ ವಂಶ ನಿರ್ವಂಶವಾಗುವ ಗಳಿಗೆ ಸನ್ನಿಹಿತವಾದಂತೆ ಸಾಕ್ಷಾತ್ಕಾರವಾಗತೊಡಗಿತ್ತು.

ರಾಜಪ್ಪನವರ ಕುಟುಂಬದವರನ್ನೆಲ್ಲಾ ಗೌಡರ ಹಟ್ಟಿಯಲ್ಲಿ ಸುರಕ್ಷಿತವಾಗಿ ಇಡುವ ಏರ್ಪಾಡು ನಡೆಯುತ್ತಿದ್ದಂತೆಯೇ, ಮುಸ್ಲಿಂ ಜನಾಂಗದ ಮುಖ್ಯಸ್ಥರಾದ ಇಮಾಂಸಾಹೇಬರನ್ನು ಕರೆತರಲು ಖುದ್ದಾಗಿ ಛೇರ್ಮನ್ ಮಲ್ಲಪ್ಪರೇ ಹೊರಟು ಬಂದರು. ಹೋದ ಹತ್ತಾರು ಕ್ಷಣದಲ್ಲೇ ಧಾವಿಸಿ ಬಂದ ಅವರ ಮುಖದಲ್ಲಿ ಆತಂಕ ತಾಂಡವವಾಡುತ್ತಿತ್ತು: 'ಗೌಡರೇ, ಅಲ್ಲೂ ಇಂತಹುದ್ದೇ ಒಂದು ಸಭೆ, ಬುಡನ್‌ಸಾಬರ ಮನೇಲಿ ನಡೀತಾ ಇದೆ.' ನುಡಿದಾಗ ಇಡೀ ವಾತಾವರಣ ರಾಕ್ಷಸ ರೀತಿಯಲ್ಲಿ ಸ್ತಬ್ಧವಾಗಿಬಿಟ್ಟಿತ್ತು. ಎಲ್ಲರ ಕಂಗಳಲ್ಲೂ ಏಕಪ್ರಕಾರವಾಗಿ ಬೀದಿ ತುಂಬಿ ಹರಿಯುತ್ತಿರುವ ಕಪ್ಪು ರಕ್ತದ ಹೊಳೆ ಓಕುಳಿಯಾಡುತ್ತಿರುವ ಊರ ಮಂದಿ! ಎಚ್ಚೆತ್ತ ಶಿವಲಿಂಗೇಗೌಡರು ಬಾಗಿಲುಗಳನ್ನು ಭದ್ರಪಡಿಸಿಕೊಂಡು ಒಳಗಿರಬೇಕೆಂದು ಹೆಂಗಸರು, ಮಕ್ಕಳಿಗೆ ತಾಕೀತು ಮಾಡಿ, ಚಾವಡಿಯತ್ತ ಅಧಿಕೃತ ಅಧಿಕಾರ ಚಲಾಯಿಸಿ ಪರಿಸ್ಥಿತಿಯನ್ನು ಹತೋಟಿಗೆ ತರುವ ಏಕೈಕ ಆಶಾದೀವಿಗೆ ಹಿಡಿದು ದಾಪುಗಾಲು ಹಾಕಿದರು.

★★★

'ಈ ಊರಲ್ಲಿ, ನಮ್ದು ಬಾಳ್ವೆ ಮಾಡೋದು ಭೋತ್ ದುಸ್ತರ ಆಗ್ಯೆತೆ' ಇಮಾಂಸಾಬರ ಮುಂದೆ ಕುಳಿತ ಅಂಜುಂಭಾನುವಿನ ಅಣ್ಣ ಹುಸೇನ್ ಬಡಬಡಿಸುತ್ತಿದ್ದ; ಇವತ್ತು ಏನಾರಾ ಆಗಿಬುಡ್ಲಿ ಆ ಸಾನುಭೋಗಾನಾ ವಂಸಾನಾ ಇಲ್ಲ ಅನ್ನಿಸಿಬಿಡ್ತೀನಿ' ಹುಕ್ಕಾ ಎಳೆಯುತ್ತಾ ಇಮಾಂ ಸಾಬರು ಅವನನ್ನು ಸಮಾಧಾನಗೊಳಿಸುತ್ತಿದ್ದರು. ಬುಡನ್‌ಸಾಬ್ ದಂಪತಿ ಇದ್ದೊಬ್ಬ ಚಿನ್ನದಂಥ ಮಗಳನ್ನು ಕಳೆದುಕೊಂಡ ದುಃಖದಲ್ಲಿ ನೆಲ ತಾರಿಸಿ, ಎದೆ ಬಡಿದುಕೊಂಡು ಗೋಳು ಕರೆಯುತ್ತಿದ್ದರು. ಎಲ್ಲರ ಕಂಗಳಲ್ಲೂ ಕೆಂಪು!

ಆ ಸಂದರ್ಭಕ್ಕೇ ಯಾವ ಜನಾಂಗಕ್ಕೂ ಸೇರದ. ಊರಿಗೆ ಹೊಸಬ, ಅಲಿಪ್ತನಾದ ಭಾಟಿಯಾ, ಯಾವುದರ ಅರಿವೂ ಇಲ್ಲದೆ ಚಾವಡಿಕಟ್ಟೆಯಲ್ಲಿ ಪಂಚಾಯಿತಿ ಸೇರಿರುವ ಬಗ್ಗೆ ಸುದ್ದಿ ಮುಟ್ಟಿಸಿದ್ದೇ ತಡ 'ನಾವು ಎಲ್ಲಿಗೂ ಬರಲ್ಲ, ಬರಬೇಕಾದ ಕಡೆ ಬರಬೇಕಾದ ರೀತೀಲಿ ಬರ್ತೀವಿ